ಜೆ.ಎಂ.ಎಫ್.ಸಿ. ನ್ಯಾಯಾಲಯ ಕಟ್ಟಡ ಮತ್ತು ನ್ಯಾಯಂಗ ಅಧಿಕಾರಿಗಳ ವಸತಿ ಗೃಹ ನಿರ್ಮಾಣಕ್ಕೆ ಭೂಸ್ವಾಧೀನಪಡಿಸಿಕೊಳ್ಳಲು ಭೂ ಕೋರಿಕಾ ಪತ್ರದಂತೆ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಿ ಕಾಲಂ 4(1)ರ ಅಧಿಸೂಚನೆಯನ್ನು ಈಗಾಗಲೇ ಹೊರಡಿಸಲಾಗಿದೆ. ಪ್ರಕರಣವು ಕಾಲಂ 6(1)ರ ರೀತ್ಯಾ ಸರ್ಕಾರದಿಂದ ಅನುಮೋದನೆ ಆಗಲಿದೆ. ಈ ಉದ್ದೇಶಕ್ಕಾಗಿ ಮುಂಗಡ ಠೇವಣಿಯಾಗಿ ರೂ. 1,23,57,680–00ಗಳನ್ನು ಸರ್ಕಾರ ಬಿಡುಗಡೆ ಮಾಡುವುದು ಅವಶ್ಯಕವಿರುತ್ತದೆ. ಈ ವಿಷಯವು ಇನ್ನು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಇರುವುದರಿಂದ ಅಂದಾಜು ಪಟ್ಟಿ ಹಾಗೂ ನೀಲ ನಕ್ಷೆಯನ್ನು ಸಿದ್ಧಪಡಿಸಿರುವುದಿಲ್ಲ. ಆದಕಾರಣ, ಕಟ್ಟಡ ಕಾಮಗಾರಿಗೆ ಅನುದಾನದ ಮೊತ್ತವನ್ನು ಈ ಹಂತದಲ್ಲಿ ತಿಳಿಸಲು ಸಾಧ್ಯವಾಗುವುದಿಲ್ಲ.

ಈ) ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡು ಅವಶ್ಯ ಠೇವಣಿ ಮೊತ್ತವನ್ನು ಸರ್ಕಾರ ಬಿಡುಗಡೆಗೊಳಿಸಿದ ನಂತರ ಅಂದಾಜು ಪಟ್ಟಿ ಹಾಗೂ ನೀಲ ನಕ್ಷೆಯನ್ನು ತಯಾರಿಸಿ, ಸದರಿ ನಕ್ಷೆಯ ಗೌರವಾನ್ವಿತ ನ್ಯಾಯಧೀಶರನ್ನೊಳಗೊಂಡ ಅಧೀನ ನ್ಯಾಯಾಲಗಳ ಕಟ್ಟಡ ಸಮಿತಿಯಿಂದ ಅನುಮೋದನೆಗೊಂಡ ನಂತರ ಸರ್ಕಾರದಿಂದ ಕಾಮಗಾರಿ ಕೈಗೆತ್ತಿಗೊಳ್ಳಲು ಅನುದಾನದ ಅವಶ್ಯಕತೆ ಇದ್ದು, ಲೋಕೋಪಯೋಗಿ ಇಲಾಖೆ ನ್ಯಾಯ ಪರಿಪಾಲನೆ 4059 ಲೆಕ್ಕ ಶೀರ್ಷಿಕೆಯಲ್ಲಿ 2010–11ನೇ ಸಾಲಿನಲ್ಲಿ ಅವಶ್ಯ ಅನುದಾನ ಬಿಡುಗಡೆ ಮಾಡಿದ ನಂತರ ಸದರಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಆಯವ್ಯಯದಲ್ಲಿ ಒದಗಿಸಲಾದ ಅನುದಾನ

763(1033) ಶ್ರೀ ಬಾಲಕೃಷ್ಣ ಹೆಚ್ ಸ:(ಮಾಗಡಿ) ಮಾನ್ಯ ಸಣ್ಣ ನೀರಾವರಿ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2010–11ನೇ ಸಾಲಿನ ಬಜೆಟ್‌ನಲ್ಲಿ ಯಾವ್ಯಾವ ಇಲಾಖೆಗೆ ಯೋಜನೆ ಮತ್ತು ಯೋಜನೇತರದಲ್ಲಿ ಎಷ್ಟೆಷ್ಟು ಹಣವನ್ನು ಒದಗಿಸಲಾಗಿದೆ. (ಪ್ರತ್ಯೇಕ ಮಾಹಿತಿ ನೀಡುವುದು);

ಆ) ಮೇ 2010ರ ಅಂತ್ಯಕ್ಕೆ ಯಾವ್ಯಾವ ಇಲಾಖೆಗೆ ಯೋಜನೆ ಮತ್ತು ಯೋಜನೇತರದಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. (ಇಲಾಖಾವಾರು ಪ್ರತ್ಯೇಕ ಮಾಹಿತಿಯನ್ನು ನೀಡುವುದು);

ಇ) ಬಿಡುಗಡೆ ಮಾಡಿರುವ ಹಣದಲ್ಲಿ ಎಷ್ಟು ಖರ್ಚು ಮಾಡಲಾಗಿದೆ (ಇಲಾಖಾವಾರು ಮಾಹಿತಿಯನ್ನು ನೀಡುವುದು)?

ಶ್ರೀ ಗೋವಿಂದ ಎಂ ಕಾರಜೋಳ:(ಸಣ್ಣ ನೀರಾವರಿ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು)

ಅ) 2010–11ನೇ ಸಾಲಿನ ಆಯವ್ಯಯದಲ್ಲಿ ಯೋಜನೆ ಮತ್ತು ಯೋಜನೇತರ ಬಾಬತ್ತಿನಡಿಯಲ್ಲಿ ವಿವಿಧ ಇಲಾಖೆಗಳಿಗೆ ಒದಗಿಲಾಗಿರುವ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಮೇ 2010ರ ಅಂತ್ಯದವರೆಗೆ ಯೋಜನೆ ಮತ್ತು ಯೋಜನೇತರ ಬಾಬತ್ತಿನಡಿಯಲ್ಲಿ ವಿವಿಧ ಇಲಾಖೆಗಳಿಗೆ ಬಿಡುಗಡೆ ಮಾಡಿರುವ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಮೇ ಅಂತ್ಯದವರೆಗೆ ಯೋಜನೆ ಮತ್ತು ಯೋಜನೇತರ ಬಾಬತ್ತಿನಡಿಯಲ್ಲಿ ವಿವಿಧ ಇಲಾಖೆಗಳಿಗೆ ಬಿಡುಗಡೆ ಮಾಡಿರುವ ಹಣದಲ್ಲಿ ಭರಿಸಲಾಗಿರುವ ಖರ್ಚಿನ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ವಿಮಾನ ನಿಲ್ದಾಣ ಪ್ರಾರಂಭ

764(475) ಶ್ರೀ ಬಂಡೆಪ್ಪ ಕಾಶೆಂಪೂರ್:(ಬೀದರ್ ದಕ್ಷಿಣ) ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ವಿಮಾನ ನಿಲ್ದಾಣವನ್ನು ಸರ್ಕಾರ ಸ್ವಾಧೀನಕ್ಕೆ ಪಡೆದುಕೊಂಡಿದೆಯೇ;

ಆ) ಹಾಗಿದ್ದಲ್ಲಿ, ಈವರೆವಿಗೂ ಕಾರ್ಯಾರಂಭ ಮಾಡದಿರಲು ಕಾರಣಗಳೇನು;